ಬಂದಂತಹ ಭಯವೂ ಶುರುವಾಗಿತ್ತು.

ವಯಸ್ಸಾಗದೇ ಸಾಯಬಾರದಂತೆ. ಹಾಗೆ ಸತ್ತರೆ ದೆವ್ವ ಪ್ರೇತ ಪಿಶಾಚಿ ಪೀಡೆ ಆಗ್ತಾರಂತೆ ಅಂತನ್ನುವ ಮಂತ್ರಪಠಣದಂತೆ ಸಾಲುಗಳ ಜೊತೆ ಆತ್ಮಹತ್ಯೆ ಮಾಡಿಕೊಳ್ಳಬಾರದಂತೆ ಅಂತನ್ನುವ ಹೊಸ ವಿಷಯ ಶಾಲೆಯಲ್ಲಿ ಕಲಿಸದೇ ವೈಶಾಲಿ ಪುಟ್ಟಿಗೆ ಅಂತರ್ಗತವಾಯಿತು. ಮೂರು ತಿಂಗಳಿಗೊಮ್ಮೆ ಸರೀ ಬೇಸಿಗೆಯ ಸಮಯಕ್ಕೆ ಮನೆಗೆ ಬರುತ್ತಿದ್ದ ಪ್ರಶಾಂತ ಮಾಮನ ನೆನಪಿದೆ ಅವಳಿಗೆ. ವೈಶಾಲಿನಿ ವೈಶಾಲಿನಿ ಅಂತನ್ನುತ್ತ ಯಾವಾಗಲೂ ಹಲ್ಲುಬಿಟ್ಟು ನಗುತ್ತಿದ್ದ. ಕಪ್ಪುದೇಹ, ಗುಂಗುರು ಕೂದಲು, ಗಿಡ್ಡಮೈ. ಯಾವಾಗಲೂ ಕೂಲಿಂಗ್ ಗ್ಲಾಸು ಹಾಕಿರುತ್ತಿದ್ದ. ಎಡಗೈ ಕಿರುಬೆರಳು ಉಗುರು ಉದ್ದಕ್ಕೆ ಬಿಟ್ಟಿದ್ದ. ಟೀ ಶರ್ಟು ದೊಗಳೆ ಚಡ್ಡಿಯಲ್ಲಿ ವಿಚಿತ್ರ ಚುರುಕಿನಲಿ ಓಡಾಡುತ್ತಿರುತ್ತಿದ್ದ ಮಾಮಾನ ಕಂಡರೆ ಅವಳಿಗೆ ಅಚ್ಚುಮೆಚ್ಚು. ಮನೆಯ ಅಡುಗೆ ಅವನಿಗೆ ಸುತಾರಾಂ ಸೇರುತ್ತಿರಲಿಲ್ಲ. ‘ಇದೆಂತ ಮಳ್ಳು ಬೇಯ್ಸಾಕ್ತೆ… ಅಕ್ಕ…’ ಅಂತಂದು ಎದ್ದು ಹೋಗಿ ನಾಲ್ಕು ಹಳ್ಳದ ಮೀನು ಹಿಡಿದುಕೊಂಡು ಬಂದು ತಾನೇ ಒಲೆ ಮುಂದೆ ಕೂತು ಗಾಟು ಬಡಿಯುವಂತಹ ಫಿಶ್ ಫ್ರೈ ಮಾಡುತ್ತಿರುತ್ತಿದ್ದ. ಪೇಟೆಯಿಂದ ವಾಸನೆಯ ಮೈಯಲ್ಲಿ ತಡವಾಗಿ ಬರುತ್ತಿದ್ದವನು ಗೋಭಿ ಮಂಚೂರಿಯನ್ ತರುತ್ತಿದ್ದ. ಯಾರ ಯಾರನ್ನೋ ಕರೆತಂದು ಮನೆ ಹಿಂಭಾಗದ ಕಾಡಿನಲ್ಲಿ ಮರಗಳನ್ನು ತಟ್ಟಿ ಮುಟ್ಟಿ ತೋರಿಸುತ್ತಿದ್ದ. ಮೂರು ನಾಲ್ಕು ಗಂಟೆಗೆ ಗರಗಸ ತಂದು ಹಿತ್ತಲಿನಲ್ಲಿ ಬಚ್ಚಿಟ್ಟು ಬಂದು ಹೊರಗೇ ಹೊದ್ದು ಮಲಗುತ್ತಿದ್ದ. ಭಾನುವಾರಕ್ಕೆ ಸಂಡೇ ಸಂಡೇ ಅಂತನ್ನುತ್ತಿದ್ದ… ಕೋಳಿಮಾಂಸ ತಂದು ಚಿಕನ್ ಚಿಕನ್ ಸೂಪರ್ ಚಿಕನ್ ಅನ್ನುತ್ತ ಅಮ್ಮನ ರಟ್ಟೆ ಹಿಡಿದು ಎಬ್ಬಿಸಿ, ತಾನೇ ಮಂಗಳೂರು ಸ್ಟೈಲು, ಗೋವಾ ಸ್ಟೈಲು ಅಂತ ಸಿಕ್ಕಾಪಟ್ಟೆ ಎಣ್ಣೆಯಲ್ಲಿ ಕೋಳಿ ಕಾಲು ಮುಳುಗಿಸಿ ಕರಿಯುತ್ತಿದ್ದ… ತಾನೊಬ್ಬನೇ ರಾಕ್ಷಸನಂತೆ ತಿನ್ನುತ್ತಿದ್ದ… ಮಾತು ಮಾತಿಗೂ ಪ್ರಾಮಿಸ್ ಪ್ರಾಮಿಸ್ ಅನ್ನುತ್ತಿದ್ದ… ಹಿಂದಿನ ಹೆಗ್ಗಾನಿನ ದೊಡ್ಡ ಮತ್ತಿ ಮರಕ್ಕೆ ಶಾಲಿನಿ ಪ್ರಶಾಂತ ಅಂತ ಕೆತ್ತಿದ್ದೀನಿ ನೋಡು ಅಂತ ತೋರಿಸಿದ್ದ. ಸ್ಪೆಲ್ಲಿಂಗು ಮಿಸ್ಟೇಕು ಆಗಿ ಶಲಿನಿ ಪಶಂತ ಆಗಿತ್ತು ಇಂಗ್ಲಿಷಿನಲ್ಲಿ. ಸರಿ ಬರೆದುಕೊಡು ಅಂತ ಬರೆಸಿಟ್ಟುಕೊಂಡ ಚೀಟಿ ಎಲ್ಲೋ ಬಿಸಾಡಿದ್ದ. ಮಾಮ ಇಲ್ಲದ್ದಾಗ ಅಪ್ಪ ಅವನ ಬೈಯುತ್ತಿದ್ದ. ಮಸ್ಕಿರಿ ಗಂಡ್ಸಿಗೆ ಕೆಲ್ಸ್ಕೆ ಹೋಗೂಕ್ ಹೇಳು. ಅಂತ ಜೋರು ಮಾಡಿದಾಗ… ‘ಹ್ವಾಯ್ ಸೆಣ್ಣ ಸತ್ತ್ ಹುಟ್ಟೇನು. ನನ್ನ ಅಬ್ಬಿ ಸತ್ತಾಗ ಇಂವ ಹುಟ್ಟಿದ್ದು. ಎದಿಹಾಲೂ ದಕ್ಕಿಲ್ಲ ಅದ್ಕೆ… ಮಳ್ಳ್ ಮಾಡ್ದಂಗ್ ಮಾಡುತ್ತ್ ಅಷ್ಟೇಯಾ… ಮನ್ಸ್ ಚಲೋದು…’ ಅಂತನ್ನುತ್ತಿದ್ದ ಅಮ್ಮನ ಮಾತನ್ನು ವೈಶಾಲಿ ಕೇಳಿಸಿಕೊಂಡು ಗೆಳತಿಯರನ್ನೆಲ್ಲಾ ಕೂಡಿಸಿಕೊಂಡು ಹೇಳಿಬಿಟ್ಟಿದ್ದಳು. ಮಾಮಾ ಬಂದ. ಹೋದ. ಮತ್ತೆ ಬಂದ. ಮನೆಯಲ್ಲೇ ಇರುತ್ತಿರಲಿಲ್ಲ. ಟಿ ಶರ್ಟು ಬಿಟ್ಟು ಶರ್ಟು ಬಂತು. ಯಾವುದೋ ಬೈಕು ತಂದು ನಿಲ್ಲಿಸಿದ. ಒಂದೆರೆಡು ಬಾರಿ ವೈಶಾಲಿಯನ್ನು ಭಾರೀ ಸ್ಪೀಡಿನಲ್ಲಿ ಪೇಟೆವರೆಗೂ ಕರೆದೊಯ್ದು ವಾಪಸ್ ಕರೆತಂದ. ಆಮೇಲಾಮೇಲೆ ಕಾಡಿನ ಮಧ್ಯೆ ಕರೆದೊಯ್ದು ನಿಲ್ಲುವುದು. ಯಾರನ್ನೋ ಕಾಯುವುದು. ಸಿಗರೇಟ್ ಸುಡುವುದು. ಛೆ ಛೆ ಅನ್ನುವುದು ಮಾಡುತ್ತಿರುತ್ತಿದ್ದ. ವೈಶಾಲಿಗೆ ಮಾಮನಿಗೆ ಬಡಿದುಕೊಂಡ ರೋಗ ಯಾವುದು ಹೊಳೆಯಲಿಲ್ಲ. ಅವಳ ಅಮ್ಮ ಅವನ ಮನೆ ಹೊರಗೆ ಕರೆದು ಬೈದು ಕಳಿಸುತ್ತಿದ್ದಳು. ಕಣ್ಣೀರಲ್ಲೇ ದುಡ್ಡು ಕೊಡುತ್ತಿದ್ದಳು. ‘ಘನಾದ ತಪ್ ಮಾಡ್ದೆ ಸೆಣಾ… ಇದೆಲ್ಲ ಬ್ಯಾಡ್ದಾ… ನನ್ ಮಾತ ಕೇಳಾ…’ ಅಂತೆಲ್ಲ ಬೇಡಿಕೊಂಡಳು. ವೈಶಾಲಿ ಮಾಮಾ ಮಾತನಾಡುವುದು ಕಡಿಮೆ ಮಾಡಿದ. ಪ್ರಾಮಿಸ್, ಪ್ರಾಮಿಸ್ ಅನ್ನುವುದೂ… ಮೀಸೆ ಬೋಳಿಸಿ ಬೇರೆ ಯಾರೋ ಅನ್ನುವಂತೆ ಕಾಣುತ್ತಿದ್ದ… ಕಣ್ಣು ಕೆಂಪಾಗೇ ಇರುತ್ತಿದ್ದವು… ಕಾಡಿನ ದಾರಿಯಲ್ಲಿದ್ದ ನಾಗರಕಟ್ಟೆಗೆ ಹೋಗಿ ಕೂರುತ್ತಿದ್ದ.

ಮಾಮಾ ಬೇಸಿಗೆ ರಜೆಗೆ ಬರಲಿಲ್ಲ. ಪ್ರಾಮಿಸ್ ಮಾಡಿಯೂ ನಂಬರಿನ ವಾಚ್ ತಂದುಕೊಡಲಿಲ್ಲ. ತಲೆಗೆ ಎಣ್ಣೆ ತಿಕ್ಕಿಕೊಂಡು, ಕಬ್ಬಿಣದ ಕುರ್ಚಿ ಹಾಕಿಕೊಂಡು, ಬರಿಮೈಯಲ್ಲಿ ಹವಾಯಿ ಚಪ್ಪಲಿಯ ಕಾಲು ಆಡಿಸುತ್ತ ಕೂರಲಿಲ್ಲ. ಗೋಭಿ ಮಂಚೂರಿಯೂ ಸಿನಿಮಾನೂ ಹುಬ್ಬಳ್ಳಿ ಪೇಟೆಯ ಸುದ್ದಿಯೂ ಮರೆಯಾದವು. ಮಾಮಾ ಕೆಲಸ ಬಿಟ್ಟಿದ್ದಾನೆ ಅಂದರು ಜನ. ಪ್ರಶಾಂತ ಕಳ್ಳ ಅಂದರು.

